ಕೊನೆಗೊಂದು ಒಪ್ಪಂದಕ್ಕೆ ಬಂದರು ಹಿರಿಯಪ್ಪ.

'ಅಷ್ಟೊ ಮೀರಿ ಓದ್ಲೇಬೇಕೂಂತಾದ್ರೆ ಒಂದು ಡಿಗ್ರಿ ಮಾಡ್ಲಾ. ಅಲ್ಲೀವರೆಗೆ ನನ್ನ ಕೈಲೂ ಒಂದಿಷ್ಟು ದುಡ್ಡು ಒಟ್ಟಾಗಿರುತ್ತೆ. ಮದುವೆ ಅಂದ್ರೆ ಸಸಾರ ಅಲ್ಲ...'

ದುಡ್ಡಿಲ್ಲವಾ ಹಿರಿಯಪ್ಪನ ಹತ್ತಿರ? ಹಿರೀ ಅಳಿಯ ಅವನ ವ್ಯವಹಾರಕ್ಕೆ ಕೈಗಡದ ಹೆಸರಲ್ಲಿ ಆಗಿಂದಾಗ ದುಡ್ಡು ಎತ್ತುವುದನ್ನು ಗಮನಿಸಿದ್ದಾಳೆ ಕುಸುಮಾ. ತನ್ನ ಅಮ್ಮನಿಗೆ ಈ ವ್ಯವಹಾರ ಗೊತ್ತಿರಲಿಕ್ಕಿಲ್ಲ. ಆದರೆ ಅಲ್ಲೇ ಬದಿಯ ಕೋಣೆಯಲ್ಲಿ ಕೂತು ಓದುತ್ತಿರುತ್ತಿದ್ದ ಕುಸುಮನ ಗಮನಕ್ಕೆ ಬರದೇ ಇಲ್ಲ. ಅದೇನು ಕೈಗಡವೋ ಅಥವಾ ಅಳಿಯನ ಜೊತೆ ಪಾಲುದಾರಿಕೆ ವ್ಯವಹಾರವೋ ಗೊತ್ತಿಲ್ಲ ಕುಸುಮನಿಗೆ. ಹಿರಿಯಪ್ಪನ ಹತ್ತಿರ ಬೇರೆ ಎಲ್ಲದಕ್ಕೂ ದುಡ್ಡಿದೆ. ಸ್ವಂತಕ್ಕೆ ಇದೆ. ಆದರೆ ತಮ್ಮನ ಮಕ್ಕಳ ವಿಷಯಕ್ಕೆ ಬಂದರೆ ಕೈ ಚೊಟ್ಟ ಆಗುತ್ತದೆ ಎಂದು ಕುಸುಮನಿಗೆ ಅನ್ನಿಸಿಬಿಟ್ಟಿತು. ಅಮ್ಮನ ಕಣ್ಣಲ್ಲಿ ಬಾವ ದೇವತಾ ಮನುಷ್ಯ. ಆ ಸ್ಥಾನದಿಂದ ಅವನನ್ನು ಕೆಳಗಿಳಿಸುವುದು ಸುಲಭಸಾಧ್ಯವೇನಲ್ಲ.

'ಹೆಣ್ಣು ಹುಡುಗೀನ ಎಲ್ಲೋ ಹಾಸ್ಟೆಲ್‌ನಲ್ಲಿ ಬಿಟ್ಟು ಓದಿಸೋಕೆ ನಂಗೆ ಸುತರಾಂ ಇಷ್ಟ ಇಲ್ಲ. ನಿನ್ನ ಅಣ್ಣನ್ನೇ ಹಾಸ್ಟೆಲಿನಲ್ಲಿ ಬಿಡ್ಲಿಲ್ಲ. ನಿನ್ನ ಕಳಿಸೋಕಾಗುತ್ತಾ? ಓದ್ಲೇಬೇಕೂಂತಾದ್ರೆ ಇಲ್ಲೇ ಇದ್ಗಂಡು ಓದು. ನಿನ್ನ ಒಳ್ಳೇದಕ್ಕೇ ಹೇಳ್ತಿರೋದು...' ಪ್ರಸ್ತಾಪಕ್ಕೆ ಪೂರ್ಣವಿರಾಮ ಬಿದ್ದಿತ್ತು. ಅಣ್ಣನ ಹೆಸರನ್ನು ನಡುಮಧ್ಯ ಎಳೆದು ತರಲು ಕುಸುಮನಿಗೆ ಅವಕಾಶ ದೊರೆಯಲಿಲ್ಲ ಅನ್ನುವುದಕ್ಕಿಂತಾ ಈಗಲೇ ಆ ಗುಟ್ಟಿನ ಮೊಟ್ಟೆ ಒಡೆಯಲು ಹಿಂದೇಟು ಹಾಕಿದ್ದಳು ಕುಸುಮಾ.

***

ನಿರೀಕ್ಷೆಯಂತೆ ಪ್ರವೇಶಪರೀಕ್ಷೆಯಲ್ಲಿ ಉತ್ತಮ ಅಂಕ ಬಂತು. ಬೆನ್ನ ಹಿಂದೆಯೇ ಕರುಣಾಕರನ ಸವಾರಿ ಊರಿಗೆ ಬಂದಿಳಿಯಿತು. ಮನೆಯಲ್ಲಿ ನಡೆದ ಮಾತುಕತೆಗಳನ್ನು ಅವನ ಕಿವಿ ತಲುಪಿಸಿದ್ದಳು ಕುಸುಮಾ. ತಾಯಿಯನ್ನು ಒಪ್ಪಿಸಿ ಜೊತೆಯಲ್ಲಿ ಕರೆದುಕೊಂಡು ಹೋಗುವ ನಿರ್ಧಾರದಿಂದಲೇ ಊರಿಗೆ ಬಂದಿದ್ದ ಕರುಣಾಕರ. ಇಷ್ಟು ವರ್ಷ ಗಂಡನ ಮನೆಗೆ ಕಚ್ಚಿಕೊಂಡು ಈಗ ಮನೆ ಬಿಟ್ಟು ಮಗನ ಬೆನ್ನು ಬೀಳುವ ತೀರ್ಮಾನ ತೆಗೆದುಕೊಂಡರೆ ಬಾವನಿಗೆ ಅಸಮಾಧಾನ ಆಗುವುದರಲ್ಲಿ ತಿಲಮಾತ್ರದ ಸಂದೇಹವಿಲ್ಲ ಕಮಲಾಕ್ಷಿಗೆ. ಅದನ್ನೇ ಮಗನಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದಳು ಕಮಲಾಕ್ಷಿ.

"ಬಾವನ ಮಾತು ಮೀರೋಕಾಗುತ್ತೇನೋ? ಮುಂದೆ ನಿನ್ನ ತಂಗಿಯ ಭವಿಷ್ಯಾನೂ ನೋಡ್ಬೇಕಲ್ವಾ? ಮದುವೆ ಅಂತಾದ್ರೆ ಎಲ್ಲಿಗೆ ಕದಿಯೋಕೆ ಹೋಗೋದು? ಬಾವನ ನೆರಳಲ್ಲಿದ್ರೆ ಎಲ್ಲಾ ಅವರ ಜವಾಬ್ದಾರಿ. ನೋಡ್ಕಂತಾರೆ ಅವ್ರು..."

'ಮದುವೆ ಮಾತು ಬಿಟ್ಬಿಡು. ಓದ್ಬೇಕೂಂತಿದಾಳೆ, ಓದ್ಲಿ. ಬೇಕೂಂತಾದ್ರೆ ಬ್ಯಾಂಕಲ್ಲಿ ಸಾಲಾನೂ ಸಿಗುತ್ತೆ. ಅವಳ ಮದುವೆ ಖರ್ಚನ್ನ ಅವಳೇ ದುಡ್ಕೋತಾಳೆ. ಅಥವಾ ಅವಳಿಗೆ ಇಷ್ಟಪಟ್ಟೋರನ್ನ ಮದುವೆ ಆಗ್ಲಿ'

'ಸಾಕು, ನಿಲ್ಸು. ಇಲ್ಲಿನ ಹಕ್ಕು ಬಿಟ್ಟೇಬಿಡೋದಾ?' ಅಂದಳು ಕಮಲಾಕ್ಷಿ.

'ಯಾಕೆ ಬಿಡ್ಬೇಕು? ನಾವಲ್ಲ, ನಮ್ಮ ಮಕ್ಕಳ ಕಾಲದಲ್ಲಿ ಬಂದು ಕೇಳಿದ್ರೂ ಮುಚ್ಕೊಂಡು ಪಾಲು ಕೊಡ್ಬೇಕು. ಕದ್ದು ಮಾರೋಕೂ ಬರಲ್ಲ. ನಾವು ಸೈನ್ ಮಾಡೋದು ಬೇಡ್ವಾ?'

ಅಂಗಳದ ತುದಿಯಲ್ಲಿ ನಿಂತವರನ್ನು ಮುಂಚೇಕಡೆಯ ಬಾಗಿಲಿಗೆ ಬಂದ ಹಿರಿಯಪ್ಪ ಹಣಿಕಿ ನೋಡಿಕೊಂಡು ಹೋದನಾ? ಮಧ್ಯಾಹ್ನದ ಚುಟುಕು ನಿದ್ದೆ ಇಷ್ಟು ಬೇಗ ಮುಗಿದು ಹೋಯಿತಾ?

ಕಾಫಿ ಸೋಸಲು ಗಡಿಬಿಡಿಯಿಂದ ಒಳಗೆ ನಡೆದಳು ಕಮಲಾಕ್ಷಿ.

***

'ಆಯ್ತು, ದೊಡ್ಡೋರಾಗಿದೀರಿ ಇಬ್ರೂ. ನಿಮ್ಮ ತೀರ್ಮಾನಕ್ಕೆ ನಾನು ಅಡ್ಡ ಮಾತು ಹೇಳಲ್ಲ. ದೇವ್ರು ಒಳ್ಳೇದು ಮಾಡ್ಲಿ..' ಹೊರಟು ನಿಂತ ತಮ್ಮನ ಮಕ್ಕಳಿಗೆ ಹಾರ್ದಿಕವಾಗಿ ಆಶೀರ್ವದಿಸಿದರು ಹಿರಿಯಪ್ಪ.

ಅತ್ತತ್ತು ಕೆಂಪು ದಾಸವಾಳಗಳಂತಾಗಿದ್ದ ಕಣ್ಣುಗಳಿಂದ ಮಕ್ಕಳನ್ನು ಉಣುಗೋಲಿನವರೆಗೆ ಹೋಗಿ ಬೀಳ್ಕೊಟ್ಟು ಬಂದಳು ಕಮಲಾಕ್ಷಿ.

'ಪುಣ್ಯಾತ್ಗಿತ್ತಿ, ಸಾಕೇ ಅತ್ತಿದ್ದು. ದಿನ ಕಳೆದ ಹಾಗೆ ಎಲ್ಲಾನೂ ಅಭ್ಯಾಸ ಆಗುತ್ತೆ. ನಾನು ನನ್ನ ಮಕ್ಕಳನ್ನ ಗಂಡನ ಮನೆಗೆ ಕಳಿಸಿಕೊಡ್ಲಿಲ್ವಾ? ನೀನೇನು ಲೋಕಕ್ಕಿಲ್ಲದೋಳಾ?'

ಹೆಂಡತಿಯ ಮಾತಿಗೆ ತಲೆ ಕುಣಿಸಿ ಸಮ್ಮತಿಯ ಮುದ್ರೆ ಒತ್ತಿದರು ಬಾವಯ್ಯ. ●